ಮೂವರು ಕೊಂಡಿದ್ದರು, ಆದರೆ ಅದರ ಹಂಚಿಕೆ ಆಗಿರಲಿಲ್ಲ. ಗಂಗಾರಾಮ್ ಅವರನ್ನು ಕೇಳಿದಾಗ 'ನಿಮಗೆ ಇಷ್ಟ ಇರುವ ಕಡೆ ನಿರ್ಮಾಣ ಮಾಡಿ, ನಿಮಗೆ ಇಷ್ಟವಾದ ಭಾಗವನ್ನು ನೀವು ಇಟ್ಟುಕೊಳ್ಳಬಹುದು' ಎಂದರು. ಅವರು ಸದ್ಯಕ್ಕೆ ತಮ್ಮ ಜಾಗದಲ್ಲಿ ಯಾವುದೇ ಕಟ್ಟಡ ಕಟ್ಟಲು ಬಯಸಿರಲಿಲ್ಲ. ಭಾವೇಶ್ ತಮ್ಮ ಕನಸನ್ನು ಆ ನೆಲದಲ್ಲಿ ನನಸಾಗಿಸಬೇಕಿತ್ತು. ಒಟ್ಟಿಗೇ ಕಟ್ಟಡ ಕಟ್ಟಲು ಬೇಕಾದ ಅಷ್ಟೂ ಹಣ ಹೊಂದಿಸುವುದು ಕಷ್ಟ ಎಂದು ತಿಳಿದಿತ್ತು. ತಮ್ಮ ಕೈಗೆ ಹಣ ಕೂಡಿದಂತೆ ಕಟ್ಟಡವನ್ನು ಮುಂದುವರೆಸುವಂತಹ ಸಮಾಧಾನದ ವ್ಯಕ್ತಿ ಸಿಕ್ಕರೆ ಅನುಕೂಲವಿತ್ತು.

ಭಾವೇಶ್ ಅವರು ಭಾವಸಾ ಅವರೊಂದಿಗೆ ಮಾತನಾಡಿದರು. ಅವರು ಭಾವೇಶ್‌ಗೆ ದಿಲೀಪ್ ಶಿಂಧೆ ಅವರನ್ನು ಪರಿಚಯಿಸಿದರು. ಭಾವಸಾ ಅವರ ಬಂಗಲೆಯ ಪೂರಾ ಕೆಲಸವನ್ನು ಅವರೇ ಮಾಡಿದ್ದರು. ಅವರು ಬಹಳ ಶ್ರಮವಹಿಸಿ ಕೆಲಸ ಮಾಡುವವರು. ಇಂಜಿನಿಯರ್ ಆಗಿದ್ದರೂ, ಸೈಕಲ್‌ನಲ್ಲಿ ಒಂದೊಂದು ಸಿಮೆಂಟ್ ಮೂಟೆ ತಂದು ತಮ್ಮ ಉದ್ಯೋಗವನ್ನು ಆರಂಭಿಸಿದ್ದರು.

ಇಂದು ಅವರು ಶಾಂತಿ ಕನ್‌ಸ್ಟ್ರಕ್ಷನ್ ಹೆಸರಿನ ದೊಡ್ಡ ಕಂಪನಿಯ ಮಾಲೀಕರಾಗಿದ್ದರು. ದಿಲೀಪ್ ಅವರೊಂದಿಗೆ ಭಾವೇಶ್ ಅವರ ಜೊತೆಯಾಯಿತು. ಆ 7000 ಚದರ ಅಡಿ ಜಾಗದಲ್ಲಿ 3000 ಚದರ ಅಡಿಯಲ್ಲಿ ಕಟ್ಟಡ ನಿರ್ಮಾಣ ಮಾಡುವ ಯೋಜನೆಯನ್ನು ಮುಂದಿಟ್ಟರು. ಅದರಲ್ಲಿ ಒಂದು ದೊಡ್ಡ ಹಾಲ್, ಮೂರ್ನಾಲ್ಕು ಶೌಚಾಲಯಗಳು, ನಾಲ್ಕೈದು ಕೊಠಡಿಗಳು ಮತ್ತು ಮ್ಯಾನುಫ್ಯಾಕ್ಚರಿಂಗ್‌ಗೆ ಬೇಕಾದ ಸುಮಾರು 1500 ಚದರಡಿಯ ಒಂದು ಬೇರೆಯಾದ ಶೆಡ್ ಬೇಕಿತ್ತು. ಮಹಾಬಲೇಶ್ವರ ಪರಿಸರ ಸಂವೇದನಾಶೀಲ ಕ್ಷೇತ್ರವಾದ ಕಾರಣ, ನಿರ್ಮಾಣಕ್ಕೆ ಅನುಮತಿ ತೆಗೆದುಕೊಳ್ಳುವ ಅಗತ್ಯವಿತ್ತು. ಮಹಡಿ ಹಾಕದೆ, ನೆಲದಲ್ಲಿಯೇ ಹರಡಿ ನಿಲ್ಲುವ ಕಟ್ಟಡ ಇದಾಗುವಂತೆ ವಿನ್ಯಾಸ ಮಾಡಲು ಯೋಜಿಸಿದರು. ದಿಲೀಪ್ ಶಿಂಧೆ ಅವರಿಗೆ ಆವಲೆ ಎಂಬುವರ ಪರಿಚಯವಿತ್ತು. ಅವರು ಮಹಾಬಲೇಶ್ವರದಲ್ಲಿ ಶಿಕ್ಷಕರೂ ಹಾಗೂ ಪತ್ರಕರ್ತರೂ ಆಗಿದ್ದರು. 'ಬೇಡ ಬೇಡ ಅನ್ನುತ್ತಲೇ ಇಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಹೋಟೆಲ್‌ಗಳು, ರೆಸಾರ್ಟ್‌ಗಳು ಪ್ರತಿ ವರ್ಷ ಕಾಯಿದೆ ಕಾನೂನುಗಳನ್ನು ಗಾಳಿಗೆ ಹಾರಿಸಿ, ಹೊಸ ಹೊಸದಾಗಿ ಎದ್ದು ನಿಲ್ಲುತ್ತಿವೆ. ಅಂಧರಿಗೆ ಜೀವನೋಪಾಯವನ್ನು ಕಲ್ಪಿಸುವ ಒಳ್ಳೆಯ ಕೆಲಸಕ್ಕೆ ನಿರ್ಮಾಣ ಮಾಡಲು ಹೊರಟಿದ್ದೀರಿ' ಎಂದು ಹೇಳಿದ ಅವರು, ಭಾವೇಶ್ ಮತ್ತು ಅವರ ಅಂಧ ಮಿತ್ರರನ್ನು ಸತಾರಾ ಜಿಲ್ಲೆಯ ಕಲೆಕ್ಟರ್ ಬಳಿಗೆ ಕರೆದೊಯ್ದು ಭೇಟಿ ಮಾಡಿಸಿದರು. ಅವರಿಗೆ ಭಾವೇಶ್ ಅವರ ಪೂರ್ಣ ಕೆಲಸದ ಬಗ್ಗೆ ತಿಳಿದುಬಂದಾಗ, ತಕ್ಷಣವೇ ಅನುಮತಿ ನೀಡಿದರು. ಈಗ ನಿರ್ಮಾಣದ ಕೆಲಸ ಆರಂಭವಾಯಿತು.

ರತ್ನಪಾರಖೀ ಅವರೂ ವೃತ್ತಿಯಿಂದ ವಾಸ್ತುಶಿಲ್ಪಿ. ಅವರು ಅಮೆರಿಕದಲ್ಲಿ ಅಸ್ವಸ್ಥರಿದ್ದರೂ, ಭಾವೇಶ್ ಅವರ ಅಗತ್ಯವನ್ನು ಗಮನದಲ್ಲಿ ಇಟ್ಟುಕೊಂಡು ಅತ್ಯಂತ ಕಡಿಮೆ ಖರ್ಚಿನಲ್ಲಿ ನಿರ್ಮಾಣ ಆಗುವಂತೆ ಕಟ್ಟಡದ ವಿನ್ಯಾಸವನ್ನು ತಯಾರಿಸಿ ದಿಲೀಪ್ ಅವರಿಗೆ ಕಳುಹಿಸಿದರು. ನಿರ್ಮಾಣಕ್ಕೆ 25ರಿಂದ 30 ಲಕ್ಷ ರೂಪಾಯಿಗಳ ಅಗತ್ಯವಿತ್ತು. ಇಡೀ ತಂಡ ತಾವು ಹೆಚ್ಚು ಶ್ರಮ ಹಾಕಿ ದುಡಿಯಲು ಟೊಂಕ ಕಟ್ಟಿ ನಿಂತರು. ಇಡೀ ತಂಡ ಒಂದೇ ಸ್ವರದಲ್ಲಿ ಹೇಳಿತು, 'ಭಾವೇಶ್ ಭಾಯಿ, ಇದೆಲ್ಲವನ್ನೂ ನೀವು ನಮಗಾಗಿ ಮಾಡುತ್ತಿದ್ದೀರಿ. ಇವತ್ತಿನಿಂದ ನಾವು ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡುತ್ತೇವೆ. ಮತ್ತಷ್ಟು ಸ್ಟಾಲ್‌ಗಳನ್ನು ಹಾಕೋಣ. ನಿಮ್ಮ ಈ ಪ್ರಾಜೆಕ್ಟ್‌ನಲ್ಲಿ ನಾವು ನಿಮ್ಮ ಜೊತೆ ಇದ್ದೇವೆ'.

ಜಮೀನು ಖರೀದಿ ಮಾಡುವಾಗಲೇ ಭಾವಸಾ ಮತ್ತು ಕೃಷ್ಣಕಾಂತ್ ಅವರು ಕಟ್ಟಡ ಕಟ್ಟಲು ಬೇಕಾದ ಹಣವನ್ನು ತಮ್ಮಿಂದ ತೆಗೆದುಕೊಳ್ಳಲು ಆಗ್ರಹಿಸಿದರು. ಆದರೆ ಭಾವೇಶ್ ಅವರಿಗೆ ಅದು ಸಮ್ಮತವಿರಲಿಲ್ಲ. ಇವರ ಭಾವನೆಯನ್ನು ಅರ್ಥ ಮಾಡಿಕೊಂಡ ಅವರು ಬಲವಂತ ಪಡಿಸಲಿಲ್ಲ. ಹಗಲು ರಾತ್ರಿಯ ದುಡಿಮೆ ಮೆಲ್ಲನೆ ಹಣವನ್ನು ಕೂಡಿಸುತ್ತಿತ್ತು. ವೇಗವಾಗಿ ಸಾಗುವುದು ಸಾಧ್ಯವಿರಲಿಲ್ಲ. ಚಿಂತೆಯಿಲ್ಲ, ನಿಧಾನ ಗತಿಯಲ್ಲಿಯೇ ನಿರ್ಮಾಣದ ಕಾರ್ಯ ಆರಂಭವಾಗಿ, ಮುಂದುವರೆಯಿತು. ಬಹಳಷ್ಟು ಬಾರಿ ಭಾವಸಾ ಅವರ ಸಲಹೆಯನ್ನು ಪಡೆಯಲು ಭಾವೇಶ್ ಪುಣೆಗೆ ಹೋಗುತ್ತಿದ್ದರು. ಕೆಲಸದ ವಿಷಯದ ನಡುವೆ ಭಾವಸಾ ಅವರು ಓಶೋ ಅವರ ವಿಚಾರಗಳನ್ನೂ ಹೇಳುತ್ತಿದ್ದರು. ಅನೇಕ ಬಾರಿ ಅವರೊಡನೆ ಕೋರೆಗಾಂವ್ ಪಾರ್ಕ್‌ನಲ್ಲಿದ್ದ ಓಶೋ ಆಶ್ರಮಕ್ಕೂ ಹೋಗಿದ್ದರು. ಅಲ್ಲಿಂದ ಹೊಸ ಉತ್ಸಾಹದಿಂದ ಹಿಂತಿರುಗಿ ಮಹಾಬಲೇಶ್ವರಕ್ಕೆ ಬರುತ್ತಿದ್ದರು.

ಭಾವಸಾ ಅವರ ಸಂಬಂಧಿಯಾದ ಗಿರೀಶ್ ಭಾಟಿಯಾ ಅಹಮದ್‌ನಗರದವರು. ಅವರಲ್ಲಿ ಟಾಟಾ ಕಂಪನಿಯ ಕಬ್ಬಿಣದ ಸರಳುಗಳ ಏಜೆನ್ಸಿ ಇತ್ತು. ಅವರು ಯಾವುದೇ ಕಮಿಷನ್ ತೆಗೆದುಕೊಳ್ಳದೆ ಒಳ್ಳೆಯ ಗುಣಮಟ್ಟದ ಸರಳುಗಳನ್ನು ಮಹಾಬಲೇಶ್ವರಕ್ಕೆ ಕಳುಹಿಸಿದರು.

ಭಾವೇಶ್ ಅವರ ಕಟ್ಟಡ ನಿರ್ಮಾಣವಾಗುತ್ತಿದ್ದ ಈ ತಾಣದಲ್ಲಿ ಎಲ್ಲ ಕಡೆಗಿಂತಲೂ ಹೆಚ್ಚು ಮಳೆ ಬೀಳುತ್ತದೆ. ಸುಮಾರು 300 ಅಂಗುಲದಷ್ಟು ಮಳೆ ಆಗುವ ಕಾರಣದಿಂದ ಈ ಕ್ಷೇತ್ರ ಭಾರತದಲ್ಲಿ ಅತಿವೃಷ್ಟಿಗೆ ಪ್ರಸಿದ್ಧಿವಾಗಿದೆ. ಕೆಲಸ ಮುಂದುವರೆಯುತ್ತಿತ್ತು. ಆದರೆ ಅದನ್ನು ಪೂರ್ಣಗೊಳಿಸಲು ಇನ್ನೂ 6 ಲಕ್ಷ ರೂಪಾಯಿಗಳ ಅಗತ್ಯವಿತ್ತು. ಈ ವಿಷಯ ಕೃಷ್ಣಕಾಂತ್ ಅವರಿಗೆ ತಿಳಿದಾಗ, ಅವರು 6 ಲಕ್ಷದ ಹಣವನ್ನು ನನ್ನಿಂದ ಸಾಲವಾಗಿ ತೆಗೆದುಕೊಳ್ಳಿ. ನಂತರ ಹಿಂತಿರುಗಿಸಿ ಎಂದು ಭಾವೇಶ್ ಅವರಿಗೆ ಹೇಳಿದರು. ಒಂದು ಕಡೆ ಕಟ್ಟಡದ ನಿರ್ಮಾಣ ಮುಗಿಸಬೇಕಿತ್ತು, ಕೈಯಲ್ಲಿ ಈಗ ಹಣವೇನೂ ಉಳಿದಿರಲಿಲ್ಲ. ಕೊನೆಯಲ್ಲಿ ಕೃಷ್ಣಕಾಂತ್ ಅವರಿಂದ 6 ಲಕ್ಷ ರೂಪಾಯಿ ಸಾಲವಾಗಿ ತೆಗೆದುಕೊಂಡು ನಿರ್ಮಾಣ ಕಾರ್ಯ ಮುಂದುವರೆಸಿದರು.

ಎಲ್ಲಕ್ಕಿಂತ ಹೆಚ್ಚು ಕಷ್ಟದ ವಿಷಯ ನೀರಿನದಾಗಿತ್ತು. ಮಹಾಬಲೇಶ್ವರದಿಂದ ಕೇವಲ 10 ಕಿಲೋಮೀಟರ್ ದೂರದಲ್ಲಿ ಇರುವ ಈ ಹಳ್ಳಿ ಪೂರಾ ಪರ್ವತ ಪ್ರದೇಶ. ಬಹಳಷ್ಟು ಕಾಡೂ ಇದೆ. ಆದರೆ ಇಲ್ಲಿಯ ಜಮೀನಿನಲ್ಲಿಯ ಮಣ್ಣು ಪುಡಿಪುಡಿಯಾದದ್ದು. ಹಾಗಾಗಿ ಮಳೆ ನೀರು ಇಲ್ಲಿ ನಿಲ್ಲುವುದಿಲ್ಲ, ಎಲ್ಲವೂ ಹರಿದುಹೋಗುತ್ತದೆ. ಮಳೆಗಾಲದ ನಾಲ್ಕೈದು ತಿಂಗಳನ್ನು ಬಿಟ್ಟರೆ, ಉಳಿದಂತೆ ಸದಾ ಅಲ್ಲಿ ನೀರಿನ ಸಮಸ್ಯೆ. ಬಿದ್ದಷ್ಟು ನೀರೂ ಹರಿದು ಹೋಗುತ್ತದೆ. ಎರಡು ಬೋರ್‌ವೆಲ್ ತೋಡಿದ್ದ ಕಾರಣ, ಸ್ವಲ್ಪ ನೀರು ಸಿಗುತ್ತಿತ್ತು. ಹನಿ ಹನಿ ನೀರನ್ನು ಉಳಿಸಿ ಮುಂದುವರೆಯಬೇಕಿತ್ತು.

(ಸಶೇಷ)



ಭಾವೇಶ್ ಅವರೊಂದಿಗೆ ಲೇಖಕಿ ನೇಮಿಚಂದ್ರ